ಅಧ್ಯಕ್ಷರು : ಎರಡನೇಯ ಪಿ.ಯು.ಸಿ. ಪರೀಕ್ಷೆ ಇವತ್ತು ಶುರುವಾಗುತ್ತಿದೆ. ಪರೀಕ್ಷೆ ಮುಗಿದು, ಫಲಿತಾಂಶ ಬರಬೇಕಾಗುತ್ತದೆ. ಇನ್ನೂ ಸಮಯವಿದೆ ಅಷ್ಟರೊಳಗೆ ಮಾಡುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ : ವಿರೋಧ ಪಕ್ಷದ ಮುಖಂಡರ ಕಳಕಳಿ ನಮಗೆ ಅರ್ಥವಾಗುತ್ತದೆ. ಪರೀಕ್ಷೆ ಈಗಿನ್ನೂ ಶುರುವಾಗಿದೆ. ಪಿ.ಯುಸಿ. ಪರೀಕ್ಷೆ ಫಲಿತಾಂಶ ಹೊರ ಬಿದ್ದ ಮೇಲೆ ಉತ್ತೀರ್ಣರಾದಂಥವರು ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷೆಗೆ ಅವರು ನಾಳೆ ಬೆಳಿಗ್ಗೆ ಕೂಡುವುದಿಲ್ಲ. ಸರ್ಕಾರ ತನ್ನ ನಿಲುವನ್ನು ಸಕಾಲದಲ್ಲಿ ಘೋಷಣೆ ಮಾಡುತ್ತದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಸ್ಥಿತಿ ಇದೆ. ಆಂಧ್ರದಲ್ಲಿ ಒಂದು ಸ್ಥಿತಿ ಇದೆ, ಮಹಾರಾಷ್ಟ್ರದಲ್ಲಿ ಒಂದು ಸ್ಥಿತಿ ಇದೆ. ತಮಿಳುನಾಡಿನಲ್ಲಿ ಒಂದು ಸ್ಥಿತಿ ಇದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಿದೆ. ನಾವು ಏನು ನಿರ್ಣಯ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸೂಕ್ಷ್ಮವಾಗಿ ನಾವು ಮೊನ್ನೆ ಸದನದಲ್ಲಿ ಒಂದು ಮಾತು ಹೇಳಿದ್ದೇವೆ. ಪ್ರವೇಶ ಪರೀಕ್ಷೆಯನ್ನು ಕೈ ಬಿಡುತ್ತೇವೆ ಅಥವಾ ಕೈ ಬಿಡುವುದಿಲ್ಲ ಎನ್ನುವ ಪ್ರಶ್ನೆ ಬಗ್ಗೆ ವಿಚಾರ ಮಾಡಬೇಕಾಗಿದೆ. ಇದನ್ನು ಕೇವಲ ಕರ್ನಾಟಕದ ಹುಡುಗರಿಗೆ ಮಾಡಬೇಕೇ? ಇಡೀ ರಾಷ್ಟ್ರದ ಎಲ್ಲಾ ಹುಡುಗರಿಗೂ ಮಾಡಬೇಕೇ ? ಇವೆಲ್ಲವುಗಳ ಬಗ್ಗೆ ಯೋಜನೆ ಮಾಡಿ ಸರ್ಕಾರ ತನ್ನ ನಿಲುವನ್ನು ಅಂತಿಮವಾಗಿ ಘೋಷಣೆ ಮಾಡುತ್ತದೆ.

(3) ನಗರಸಭೆ ಮತ್ತು ಪುರಸಭೆಗಳಲ್ಲಿ ಕುಡಿಯುವ ನೀರಿನ ದರದಲ್ಲಿ ಹೆಚ್ಚಳ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, 1-4-95 ರಿಂದ ಮಹಾನಗರ ಪಾಲಿಕೆ, ನಗರ ಸಭೆ ಮತ್ತು ಪುರಸಭೆಗಳಲ್ಲಿ ಕುಡಿಯುವ ನೀರಿನ ದರವನ್ನು ಯದ್ವಾತದ್ವಾ ಜಾಸ್ತಿ ಮಾಡಿದ್ದಾರೆ. ಇದು ಬಹಳ ಪ್ರಮುಖವಾದಂಥಾದ್ದು. ಈ ಸಭೆ ನಡೆಯುವಾಗ ಸರ್ಕಾರ .....

ಅಧ್ಯಕ್ಷರು : ವೈಜನಾಥ ಪಾಟೀಲ್‌ರವರು ಬಂದಿಲ್ಲ. ಎಲ್ಲಾ ಕೆಲಸಗಳನ್ನು ಮುಖ್ಯ ಮಂತ್ರಿಗಳೇ ಮಾಡುವುದಕ್ಕಾಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಯವರು ಹೇಳಲಿ. ಅವರಿಗೆ ಎಲ್ಲಾ ಗೊತ್ತಿರುತ್ತದೆ. 6 ಪೈಸೆ ಇದ್ದದ್ದನ್ನು 45 ಪೈಸೆ ಮಾಡಿ ಹತ್ತತ್ತು ಪಟ್ಟು, ಇಪ್ಪಿಪ್ಪತ್ತು ಪಟ್ಟು ಜಾಸ್ತಿ ಮಾಡಿದ್ದಾರೆ. ಇದು ವೈಜ್ಞಾನಿಕವಾಗಿಲ್ಲ. ಹೇಳದೇ, ಕೇಳದೇ ಜಾಸ್ತಿ ಮಾಡಿದ್ದಾರೆ. ಇದು ಸರಿಯಿಲ್ಲವೆಂದು ನನಗನ್ನಿಸುತ್ತಿದೆ. ಸರ್ಕಾರ ಈಗ ಸ್ಪಷ್ಟಪಡಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ತಡೆಹಿಡಿಯಬೇಕು. ಕುಳಿತುಕೊಂಡು ಮಾತನಾಡಿ, ವೈಜ್ಞಾನಿಕವಾಗಿ ದರವನ್ನು ಜಾಸ್ತಿ ಮಾಡುವ ಬಗ್ಗೆ ಒಂದು ಚರ್ಚೆ ನಡೆಯಬೇಕು. ಅದು ಬಿಟ್ಟು ಯದ್ವಾತದ್ವಾ ಜಾಸ್ತಿ ಮಾಡುವುದಾದರೆ ಅದು ಸರಿಯಾದ ನೀತಿ ಅಲ್ಲ. ಆದ್ದರಿಂದ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದನ್ನು ಅವರು ತಕ್ಷಣಕ್ಕೆ ತಡೆಹಿಡಿಯಬೇಕು. 1-4-95ರಲ್ಲಿ ಪ್ರಾರಂಭ ಮಾಡಿದ್ದಾರೆ, ಹತ್ತು ಪಟ್ಟು ಜಾಸ್ತಿ ಮಾಡಿದ್ದಾರೆ.

ಅಧ್ಯಕ್ಷರು : ಸಭಾನಾಯಕರು ಒಪ್ಪಿಕೊಂಡ ಹಾಗೆ ಕಾಣುತ್ತಿದೆ. ನಿಮ್ಮ ಮಾತಿಗೆ ಅವರು ನಗುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗದಲ್ಲಿ ಹೋರಾಟ ಮಾಡಿದ ಮೇಲೆ ಸಂಬಂಧಪಟ್ಟ ಕಮೀಷನ್‌ರು ಸಧ್ಯಕ್ಕೆ ಶಿವಮೊಗ್ಗದಲ್ಲಿ ನಾವು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಎಂದರೆ ಇಡೀ ರಾಜ್ಯದ ಸ್ಥಿತಿ ಏನಾಗುತ್ತದೆ ?

ಶ್ರೀ ವಾಟಾಳ್ ನಾಗರಾಜ್ : 1-4-95 ರಿಂದ ಎಂದು ಸರ್ಕಾರದ ಆದೇಶ ಇದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಅದನ್ನು ಕಳುಹಿಸಿ ಕೊಡಿ ....

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ಪ್ರಶ್ನೆ ಬಂದ ದಿನ ಇದನ್ನು ತಮಗೆ ಹೇಳಿದ್ದೆ. ತಮ್ಮ ಮುಖಾಂತರ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟೆ .....

ಅಧ್ಯಕ್ಷರು : ಒಂದು ನಿಮಿಷ ಕೇಳಿ, ಕಾಗದಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಸಂಬಂಧಪಟ್ಟ ಸಚಿವರಾದ ಸನ್ಮಾನ್ಯ ವೈಜನಾಥ ಪಾಟೀಲರು ಇಲ್ಲ. ನಾಳೆಯೂ ಸದನ ಸೇರುತ್ತದೆ. ಸಂಜೆಯೊಳಗೆ ಸಭಾನಾಯಕರು, ಮಂತ್ರಿಗಳು ಮಾತನಾಡಿಕೊಂಡು, ಈ ಪ್ರಶ್ನೆಗೆ ನಾಳೆಯೊಳಗಾಗಿ ಉತ್ತರ ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳಿಗೆ ಇದೆಲ್ಲಾ ಗೊತ್ತಿದೆ. ಅವರು ಮೂಲ ವಿಗ್ರಹ. ಮೂಲ ವಿಗ್ರಹಕ್ಕೆ ಎಲ್ಲಾ ಗೊತ್ತಿರುತ್ತದೆ.

ಅಧ್ಯಕ್ಷರು : ಉತ್ಸವ ಮೂರ್ತಿ ಎಲ್ಲೋ ಹೋಗಿದೆಯೆಲ್ಲ !

ಶ್ರೀ ವಾಟಾಳ್ ನಾಗರಾಜ್ : ಅವೆಲ್ಲಾ ಉತ್ಸವ ಮೂರ್ತಿಗಳು. ಮೂಲ ವಿಗ್ರಹಕ್ಕೆ ಎಲ್ಲಾ ವಿಚಾರ ಗೊತ್ತಿರುತ್ತದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯ-ಮಂತ್ರಿಗಳಿಗೆ ಹೇಳಿದ್ದುದು ಅವರ ಕಿವಿಗೆ ಕೇಳಲಿಲ್ಲ ಎಂದು ಕಾಣುತ್ತದೆ. ತಾವು ಮೂಲ ವಿಗ್ರಹ ಇದ್ದಂತೆ ನಾನು ನೇರವಾಗಿ ಹೇಳುತ್ತೇನೆ ನೀರಿನ ದರ ಜಾಸ್ತಿ ಮಾಡುವುದಿಲ್ಲ, ತಕ್ಷಣಕ್ಕೆ ಜಾಸ್ತಿ ಮಾಡುವುದಿಲ್ಲ ಎನ್ನುವುದನ್ನು ನೇರವಾಗಿ ದಯಮಾಡಿ ಸ್ಪಷ್ಟಪಡಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ವಾಟಾಳ್‌ರವರೇ ತಾವು ಗಮನಿಸಿಲ್ಲವೆಂದು ಕಾಣುತ್ತಿದೆ. ಇಲ್ಲಿ ಸಚಿವರು ಇದ್ದಾಗ ಇದನ್ನು ಪ್ರಸ್ತಾಪ ಮಾಡಿದಾಗ ಯಾವುದೇ ಕಾರಣಕ್ಕೂ ದರವನ್ನು ಏರಿಸುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರು. ಆದರೆ ಇದು ಕಾರ್ಯರೂಪಕ್ಕೆ ಬಂದಿಲ್ಲ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ತರಹ ಸಮಸ್ಯೆ ಇದೆ. ಈಗಾಗಲೇ ಕುಡಿಯುವ ನೀರಿನ ಅಭಾವ ಇದೆ. ಸಾಕಷ್ಟು ನೀರು ಕೊಡುತ್ತಿಲ್ಲ. ಅಂಥಾದ್ದರಲ್ಲಿ ಒಂದಕ್ಕೆ ಹತ್ತು ಪಟ್ಟು ಏರಿಸುತ್ತೇವೆಂದರೆ ಜನ ಏನು ಮಾಡಬೇಕು ? ಸಭಾನಾಯಕರಾಗಿ ನಾವು ಸೂಚನೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನೀರಿನ ದರವನ್ನು ಸಧ್ಯಕ್ಕೆ ಏರಿಸುವುದಿಲ್ಲ, ಆ ಬಗ್ಗೆ ನಾವು ಸೂಚನೆ ಕೊಟ್ಟಿಲ್ಲ ಎನ್ನುವುದನ್ನಾದರೂ ಸ್ಪಷ್ಟಮಾಡಿ.

ಶ್ರೀ ವಾಟಾಳ್ ನಾಗರಾಜ್ : ತಾವು ಬೇಜಾರು ಮಾಡಿಕೊಳ್ಳಬಾರದು, ಮಾನ್ಯ ಸಭಾ ನಾಯಕರಿಗೆ ಬೇಜಾರು ಪಡಿಸುವುದಕ್ಕೆ ನಾನು ತಯಾರಿಲ್ಲ. ಆದರೆ

ಇದು ನನ್ನ ಕರ್ತವ್ಯ. ನಾನು ಪ್ರಾಮಾಣಿಕವಾಗಿ ಈ ವಿಚಾರದಲ್ಲಿ ಧರಣಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಜಾರಾದರೂ ಅಡ್ಡಿಯಿಲ್ಲ ಸತ್ಯಾಂಶ ಹೊರಗೆ ಬರಲಿ. ಅವರು ಸ್ಪಷ್ಟವಾಗಿ ಹೇಳಬೇಕು. ಹಾವೂ ಸಾಯಬೇಕು, ಕೋಲೂ ಮುರಿಯಬಾರದು ಅಂದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್ : ನಮಗೆ ಕೆಲಸ ಆಗಬೇಕು. ಇದನ್ನು ಪ್ರತಿಷ್ಠೆಯ ಪ್ರಶ್ನೆ ಮಾಡಿಕೊಂಡಾರೂ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ವಾಟಾಳ್ ನಾಗರಾಜರ್‌ರವರೆ ತಾವು ನನ್ನ ಮಾತು ಕೇಳಲೇ ಇಲ್ಲ. ಸನ್ಮಾನ್ಯ ಸಭಾನಾಯಕರು ಹೇಳಿದ್ದೇದಾನೆಂದರೆ, ಅದು ಜಾರಿಗೆ ಬಂದಿಲ್ಲ, ಅದರ ಬಗ್ಗೆ ಏಕೆ ಆಂತಕ .?

ಶ್ರೀ ವಾಟಾಳ್ ನಾಗರಾಜ್ : ತಾವು ಪೂರ್ಣ ಓದಿ ಸ್ವಾಮಿ. ಚಾಮರಾಜನಗರದಲ್ಲಿ ವಸೂಲಿಗೆ ಹೊರಟಿದ್ದಾರೆ, ನಂಜನಗೂಡಿನಲ್ಲಿ ವಸೂಲಿಗೆ ಹೊರಟಿದ್ದಾರೆ. ಎಲ್ಲಾ ಕಡೆ ವಸೂಲಿಗೆ ಹೊರಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅದಕ್ಕೇ ನಾನು ಹೇಳುತ್ತಿರುವುದು. ತಾವು ದಯಮಾಡಿ ಕುಳಿತುಕೊಳ್ಳಿ. ತಾವು ಕಾಗದಗಳನ್ನು ಕಳುಹಿಸಿ ಕೊಟ್ಟಿದ್ದೀರಿ. ಸನ್ಮಾನ್ಯ ಸಭಾನಾಯಕರು ಆ ರೀತಿ ಅಭಿಪ್ರಾಯ ಹೊಂದಿದ್ದಾರೆ. ನಾಳೆ ಒಳಗೆ ಏನೂ ಆಗುವುದಿಲ್ಲ. ಸಚಿವರೊಂದಿಗೆ ಮಾತನಾಡಿ ನಾಳೆಯೊಳಗಾಗಿ ನೀವು ಬಯಸಿದಂತೆ ನಿಮಗೆ ಸ್ಪಷ್ಟೀಕರಣವನ್ನು, ಸ್ಪಷ್ಟವಾದ ನಿಲುವನ್ನು ಸರ್ಕಾರದವರು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ತಾವು ಓದಿ. 1-4-95 ರಿಂದ ಎಂದು ಇದೆಯೇ ಸ್ವಾಮಿ ?

ಅಧ್ಯಕ್ಷರು : ಸರ್ಕಾರದ ಸ್ಪಷ್ಟವಾದ ನಿಲುವು ಏನು ಎಂದು ನಾಳೆ ಹೇಳಿಕೆ ಕೊಡಿಸೋಣ. ನಾಳೆಯೊಳಗಾಗಿ ಅರ್ಜೆಂಟ್ ಮಾಡಿದರೆ ಹೇಗೆ ? ನಾಳೆ ನಿಮಗೆ ಸಮಾಧಾನ ಆಗದಿದ್ದರೆ ನಾಡಿದ್ದು ಧರಣಿ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಇದು ಬೋರ್ಡ್ ಡಿಸಿಷನ್, ಅವರಿಗೆ ಗೊತ್ತಿಲ್ಲ ಅಂತ ಹೇಳಲಿ. ಆ ಮಾತು ಬೇರೆ. ಇದು ಬೋರ್ಡ್ ಡಿಸಿಷನ್ ಇದೆ, ಬಹುಶಃ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಲಿ. ಒಪ್ಪಿಕೊಳ್ಳೋಣ. ಆದರೆ ಸರ್ಕಾರಿ ಆದೇಶ ಇಲ್ಲ ಎಂದು ಹೇಳುವುದು ಸರಿಯಿಲ್ಲ.

ಅಧ್ಯಕ್ಷರು : ಸರ್ಕಾರದ ಪರವಾಗಿ ಅಥವಾ ನಿಮ್ಮ ಪರವಾಗಿ ನಾನು ಹೇಳಿಕೆಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸರ್ಕಾರಿ ಆದೇಶ ನೋಡಿದ ಮೇಲೆ ಇದರಲ್ಲಿ ಸತ್ಯಾಂಶ ಇದೆ ಎಂದು ನೀವೂ ಒಪ್ಪಿಕೊಂಡಿದ್ದೀರಿ ;

ಶ್ರೀ ವಿ. ಸೋಮಣ್ಣ : ಮಹಾನಗರಪಾಲಿಕೆಯಲ್ಲಿ ಇದಕ್ಕೆ ಒಂದು ನಿರ್ಣಯವನ್ನು ತಂದು ಇದನ್ನು ಮಾಡಬಾರದು ಎಂದು ತುರ್ತು ನಿರ್ಣಯ ತಂದು ಸರ್ಕಾರಕ್ಕೆ ಕಳುಹಿಸಿದ ಮೇಲೆ ಅದನ್ನು ಸ್ಥಗಿತಗೊಳಿಸಿದೆ. ಯಾವುದೋ ಅಧಿಕಾರಿಗಳು ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರದೇ ವಸೂಲಿ ಮಾಡುತ್ತಿದ್ದಾರೇನೋ. ಇದು

ಬೆಂಗಳೂರು ನಗರಕ್ಕೂ ಕೂಡ ಅನ್ವಯಿಸುವುದರಿಂದ ನಾವೂ ಕೂಡ ಇದನ್ನು ಮಾಡುವುದು ಬೇಡ ಅಂದುಬಿಟ್ಟಿದ್ದೆವು. ಹಿಂದೆಯೂ ಕೂಡ ಇದರ ಬಗ್ಗೆ ನಿರ್ಣಯವಾಗಿದೆ. ಮಾಡುವಾಗ ಸಂಬಂಧಪಟ್ಟ ಮಂತ್ರಿಗಳನ್ನು ಕನ್ಸ್‌ಲ್ಟ್ ಮಾಡಿ ಮಾಡಬೇಕಾಗುತ್ತದೆ. ಯಾರೋ ಮಾಡಿರುವುದನ್ನು ನಮ್ಮ ತಲೆಯ ಮೇಲೆ ಕೂರಿಸುವುದಲ್ಲ. ಕುಡಿಯುವ ನೀರಿನ ಸಮಸ್ಯೆ ಇರುವಾಗ ಇದು ಉಚಿತವಾದುದಲ್ಲ. ದಯಮಾಡಿ ಇದನ್ನು ಸರಿಪಡಿಸಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಹಾನಗರ ಪಾಲಿಕೆ, ನಗರ ಸಭೆಗಳು ಮತ್ತು ಪುರಸಭೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ ಪಟ್ಟಣ ಪ್ರದೇಶಗಳಲ್ಲೂ ಸುಮಾರು ಹತ್ತತ್ತು ಪಟ್ಟು ಜಾಸ್ತಿ ಮಾಡಿದ್ದಾರೆ. ಇದು ವೈಜ್ಞಾನಿಕವಾಗಿಲ್ಲ.

ಅಧ್ಯಕ್ಷರು : ಸಭಾನಾಯಕರು ಉತ್ತರ ಕೊಡುತ್ತಾರೆ. ತಾವು ಸಭಾನಾಯಕರು ನೀರಿನ ವಿಷಯವಾಗಿ ಏನು ಹೇಳುತ್ತೀರಿ ?

ಶ್ರೀ ಹೆಚ್.ಡಿ. ದೇವೇಗೌಡ : (ಮುಖ್ಯ ಮಂತ್ರಿಗಳು) ಮಾನ್ಯ ವಾಟಾಳ್ ನಾಗರಾಜ್‌ರವರು ಏನು ವಿಷಯ ಎತ್ತಿದ್ದಾರೆ ಅದು ಕರ್ನಾಟಕ ಸರ್ಕಾರದ ಆಜ್ಞಾಸಂಖ್ಯೆ ಹೆಚ್‌ಯುಡಿ:10: ಬಿಡಬ್ಲ್ಯುಎಸ್:94 ಬೆಂಗಳೂರು, ದಿನಾಂಕ 11-8-94ರಲ್ಲಿ ಹೊರಡಿಸಿದ ಆಜ್ಞಾ ನೀವು ಇದನ್ನು ಪೂರ್ತಿ ಓದಲಿಲ್ಲವೆಂದು ಕಾಣುತ್ತದೆ. ಮೊನ್ನೆ ನನ್ನ ಹತ್ತಿರ ಈ ವಿಷಯ ಬಂದಾಗ ಇದನ್ನು 1-7-95ರವರೆಗೆ ರೆಫರ್ ಮಾಡಬೇಕು ಎಂದು ಹೇಳಿದ್ದೇನೆ. ಇದರ ವಿಷಯವನ್ನು ನಾವು ಪುನಃ ಪರಿಶೀಲನೆ ಮಾಡಿ ಆಮೇಲೆ ಜಾರಿಗೆ ಕೊಡಬೇಕಾಗುತ್ತದೆ. ಇದನ್ನು ಪುನಃ ಪರಿಶೀಲನೆ ಮಾಡುತ್ತೇವೆ. ಇದನ್ನು ರೆಫರ್ ಮಾಡಬೇಕು ಎಂದು ಹೇಳಿಧ್ದೇನೆ. ಈ ಆರ್ಡರನ್ನು ವಿತ್‌ಡ್ರಾ ಮಾಡಿದ್ದೇನೆ ಎಂದು ಹೇಳಲಿಲ್ಲ. ವುನಃ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. 1-7-95ರ ವರೆಗೆ ಮುಂದೂಡಿ ಎಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಜೀವಂತವಾಗಿ ಈ ಆದೇಶ ಇದ್ದೇ ಇರುತ್ತದೆ.

ಅಧ್ಯಕ್ಷರು : ಪುನರ್‌ವಿಮರ್ಶೆ ಮಾಡುವುದಕ್ಕೆ ಅವರಿಗೆ ಅವಕಾಶ ಕೊಡಿ. 1-7-95 ರವರೆಗೆ ಈ ಸರ್ಕಾರಿ ಆಜ್ಞೆ ಜಾರಿಗೆ ಬರುವುದಿಲ್ಲ. 1-7-95 ರವರೆಗೆ ಸರ್ಕಾರ ಸಮಯ ಪಡೆದುಕೊಂಡಿದೆ. ಪುನರ್ ವಿಮರ್ಶೆ ಮಾಡಿ 1-7-95ರ ನಂತರ ಅವರು ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ.

11.30 ಎ. ಎಂ.

ಶ್ರೀ ವಾಟಾಳ್ ನಾಗರಾಜ್ : ಈಗ ಆದೇಶವನ್ನು ಅವರು ಹಿಂತೆಗೆದುಕೊಳ್ಳಲಿ ಸ್ವಾಮಿ.

ಅಧ್ಯಕ್ಷರು : ಜನರಿಗೆ ತೊಂದರೆ ಆಗದೇ ಇದ್ದರೆ ಸಾಕಲ್ಲವೇ ? ಜನರಿಗೆ ತೊಂದರೆಯಾಗುವುದಿಲ್ಲವಲ್ಲ. ಈಗ ಮುಂದಕ್ಕೆ ಹಾಕಿದ್ದಾರಲ್ಲ ! ಜನರಿಗೆ ತೊಂದರೆ ತಪ್ಪಿತಲ್ಲ.